ಮಾತಾಡ್ತಾಳೆ. ಒಳ್ಳೊಳ್ಳೆಯ ಕಥೆ ಹೇಳ್ತಾಳೆ. ಪುಸ್ತಕ ಓದ್ತಾಳೆ. ಈಗ ಅರ್ಜೆಂಟಾಗಿ ಕಥೆ ಹೇಳಬೇಕೆಂದು ಚಿಕ್ಕಮ್ಮನನ್ನು ಡಿಸ್ಟರ್ಬ್ ಮಾಡಬೇಕು.

ಏನಮ್ಮಾ ಶ್ರೀವಿದ್ಯಾ! ಕಥೆ ಹೇಳಬೇಕಾ? ಕೊನೆಯವರೆಗೆ ಕೇಳಿದರೆ ಮಾತ್ರ ಶುರು ಮಾಡತೀನಿ.

ಒಂದಾನೊಂದು ಊರು. ಊರಲ್ಲಿ ಒಂದು ಮನೆ. ಮನೆಯಲ್ಲಿ ಒಂದು ಕುಟುಂಬ. ಮನೆ ತುಂಬಾ ಕತ್ತಲು. ಒಂದೂ ಕಿಟಕಿ ಇಲ್ಲ. ಆ ಊರಿನ ಆ ಮನೆಯ ಆ ಕುಟುಂಬದಲ್ಲಿ ಒಂದು ಹೆಣ್ಣು ಮಗು ಹುಟ್ಟಿತು. ತಾಯಿ ಆ ಮಗುವಿಗೆ 'ಅನಸೂಯ' ಅಂತ ಹೆಸರಿಟ್ಟಳು. ಹುಟ್ಟಿದ ಕೂಸು ಎಲ್ಲಾ ಕಂದಮ್ಮಗಳ ಹಾಗೆಯೇ ಜೋರಾಗಿ ಅತ್ತಿತ್ತು. ಅದೇಕೋ ಸ್ವಲ್ಪ ದಿನಗಳ ಬಳಿಕ ಅದರ ಗಂಟಲು ಕೀಚಲಾಯಿತು. ಅಷ್ಟೇ ಅಲ್ಲ. ಆ ಹುಡುಗಿಯ ಬೆಳವಣಿಗೆಯೂ ಕಡಿಮೆ. ಏಳು ವರ್ಷ ಬಂದರೂ ಎರಡು ಅಡಿಗಿಂತ ಹೆಚ್ಚು ಬೆಳೆದೇ ಇಲ್ಲ. ತಲೆ ವಾಲಿಕೊಂಡಿತ್ತು. ತಲೆ ಎತ್ತಲು ಅವಳು ಪ್ರಯತ್ನ ಮಾಡಿದ್ದೇ ಇಲ್ಲ. ಎತ್ತಿದಾಗ ನೋವು ಅಂತಿದ್ದಳು. ತಲೆ ಬಗ್ಗಿಸಿಕೊಂಡೇ ಇದ್ದಳು. ಮಾತೂ ಸರಿಯಾಗಿ ಗೊತ್ತಿಲ್ಲ. ಕೆಲವರ ಜತೆ ಮಾತಾಡಲು ಪ್ರಯತ್ನ ಮಾಡ್ತಾ ಇದ್ದಳು. ಕೆಲವರನ್ನು ಕಂಡಾಗ ಮೂಕಿ ಆಗುತ್ತಿದ್ದಳು. ಅಮ್ಮನ ಜೊತೆ ಮಾತಾಡ್ತಾ ಇದ್ದಳು. ಅಪ್ಪನನ್ನು ಕಂಡರೆ ಗಂಟಲು ಬತ್ತಿ ಹೋಗುತ್ತಿತ್ತು. ಅಣ್ಣಂದಿರು ಕಂಡರೂ ಅಷ್ಟೇ. ಅವರ ಮನೆ ತುಂಬಾ ಕತ್ತಲು ಅಂತ ಹೇಳಿದ್ದೆ ತಾನೇ! ಆದರೆ ಆ ಮನೆಯಲ್ಲಿ ತಾತನವರ ಹರಿವಾಣ ಇರುವ ಕೋಣೆಯಲ್ಲಿ ಗೋಡೆಗೆ ಸಣ್ಣದೊಂದು ರಂಧ್ರ ಇತ್ತು. ಮಧ್ಯಾಹ್ನದ ಹೊತ್ತಲ್ಲಿ ಆ ರಂಧ್ರದ ಮೂಲಕ ಗುಂಡನೆಯ ಬೆಳಕು ಹರಿವಾಣದ ಮೇಲೆ ಬೀಳತಾ ಇತ್ತು. ಅನಸೂಯಾಳಿಗೆ ಆ ಬೆಚ್ಚನೆಯ ಬೆಳಕು ಬಲು ಇಷ್ಟ. ಬೆಳಕು ಅವಳ ಹೊಟ್ಟೆಯ ಮೇಲೆ ಬೀಳುವ ಹಾಗೆ ಹರಿವಾಣದ ಮೇಲೆ ಮಲಗುತ್ತಿದ್ದಳು. ಕಣ್ಣಿನ ಮೇಲೆ ಬೆಳಕು ಬಿದ್ದರೆ ಅನಸೂಯಾ ಸಹಿಸಲಾರಳು. ಯಾಕೆಂದರೆ ಅವಳು ಯಾವತ್ತೂ ಬೆಳಕನ್ನು ನೋಡಿದವಳಲ್ಲ. ಆ ಮನೆಯ ಹೆಣ್ಣು ಜೀವಗಳು ಹೊಸ್ತಿಲು ದಾಟುವ ಹಾಗಿಲ್ಲ. ಚಿಕ್ಕ ಹುಡುಗಿಯಾದರೂ ಅಷ್ಟೇ. ಬೆಳಕು ಮೂಡುವ ಮುನ್ನವೇ ಕಾಲ ಕೃತ್ಯಗಳನ್ನು ಮುಗಿಸಬೇಕು, ರಂಗೋಲಿ ಹಾಕಿರಬೇಕು, ಅರಳುವ ಮುನ್ನವೇ ಹೂ ಬಿಡಿಸಿಕೊಂಡಿರಬೇಕು. ಅದು ಆ ಮನೆಯ ಸಂಪ್ರದಾಯ.

ಎಂಟರ ವಯಸ್ಸಿಗೆ ಅನಸೂಯಾಳ ಮದುವೆ ಆಯಿತು. ಅನಸೂಯಾಳಿಗೆ ಮದುವಣಿಗನ ಪಾದ ಮಾತ್ರ ಕಂಡಿದ್ದವು. ಪಾದಕ್ಕೆ ನಮಸ್ಕಾರ ಮಾಡಿಸುವರಲ್ಲವಾ ಅದಕ್ಕೆ! ದೊಡ್ಡವಳಾದ ನಂತರ ಹದಿನಾಲ್ಕನೇ ವಯಸ್ಸಿಗೆ ಗಂಡನ ಮನೆಗೆ ಬಂದಳು.

ಆ ಮನೆ ಕೂಡಾ ತವರ ಮನೆಯ ಥರದ್ದೇ. ಆ ಮನೆಯಲ್ಲೂ ಒಂದು ಕೋಣೆಯ ಗೋಡೆಗೆ ಸಣ್ಣದೊಂದು ರಂಧ್ರ ಇತ್ತು. ಅದರ ಮೂಲಕ ಸಣ್ಣ ಬೆಳಕಿನ ಕೋಲು ಸ್ವಲ್ಪ ಹೊತ್ತು ಅಲ್ಲಿ ಬೀಳುತ್ತಿತ್ತು. ಆಗ ಅಲ್ಲಿಗೆ ಓಡಿ ಹೋಗಿ ಹೊಟ್ಟೆಯ ಮೇಲೆ ಬೆಳಕು ಬೀಳುವ ಹಾಗೆ ಚಾಪೆಯ ಮೇಲೆ ಮಲಗುತ್ತಿದ್ದಳು. ಅನಸೂಯಾಳ ಹೊಟ್ಟೆಯ ಹೊರತು ದೇಹದ ಯಾವ ಭಾಗಕ್ಕೂ ಬೆಳಕು, ಬೆಚ್ಚನೆಯ ಅನುಭವ ಗೊತ್ತಿಲ್ಲ. ಅವಳು ಕುಳ್ಳಿ ಆಗಿರುವುದು, ಅವಳ ಮೌನ, ವಾಲು ತಲೆ ಇವು ಯಾವುದೂ ಸಂತಾನ ಸಾಫಲ್ಯತೆಗೆ ಅಡ್ಡಿಯಾಗಲಿಲ್ಲ. ಒಂಬತ್ತು ಮಕ್ಕಳನ್ನು ಹಡೆದಳು. ನಾಲ್ವರು ಬದುಕಿದರು. ಅವರಲ್ಲಿ ಮೂವರು ಗಂಡು ಮಕ್ಕಳು. ಕೊನೆಯವಳು ಹೆಣ್ಣು ಮಗು. ಮಗಳು ತನ್ನ ಹಾಗೆ ಕುಳ್ಳಿ ಆಗಬಾರದೆಂದೂ, ಅವಳ ತಲೆ ತನ್ನ ತಲೆಯ ಹಾಗೆ ವಾಲಬಾರದೆಂದೂ, ಅವಳು ದನಿ ಎತ್ತಿ ಮಾತನಾಡಬೇಕೆಂದೂ, ಅನಸೂಯ ದೇವರಿಗೆ ಬೇಡಿಕೊಳ್ಳುತ್ತಿದ್ದಳು. ಮಗಳು ಬೆಳೆದು ದೊಡ್ಡವಳಾಗುತ್ತಾ ಅವಳು ಎತ್ತರ ಆಗುವುದನ್ನು ಖಾತರಿ ಮಾಡಿಕೊಳ್ಳಲು ತನ್ನ ಗೇಣಿನಿಂದ ಅಳೀತಾ ಇದ್ದಳು. ಅನಸೂಯಾಳ ಅತ್ತೆ ಸುಮತಿ ಆ ಮಗುವಿಗೆ ಕೃಷ್ಣವೇಣಿ ಅಂತ ಹೆಸರಿಟ್ಟಳು.

ಹುಟ್ಟಿದ ಒಂದು ವರ್ಷಕ್ಕೆ ಹೆಜ್ಜೆ ಇಡುತ್ತಾ ಕೃಷ್ಣವೇಣಿ ಹೊರಗೆ ಹೋಗಲು ಪ್ರಯತ್ನ ಮಾಡ್ತಾ ಇದ್ದಳು. ಯಾವಾಗಲೂ ಬೆಳಕಿನಲ್ಲಿ, ಬಿಸಿಲಿನಲ್ಲಿ ಇರಲು ಇಷ್ಟ ಅವಳಿಗೆ. ಎರಡರ ಮಗುವೇ ಇರಲಿ, ಹರೆಯದ ಹುಡುಗಿಯೇ ಆಗಿರಲಿ, ಅರವತ್ತರ ಮುದುಕಿಯೇ ಇರಲಿ ಆ ಮನೆಯ ಸಂಪ್ರದಾಯ ಮೀರುವ ಹಾಗಿಲ್ಲ. ಹಾಗಾಗಿ ಗಂಡ ಮಗಳನ್ನು ಹೊಡೆಯುವನೆಂದು ಅನಸೂಯಾ ಹೆದರುತ್ತಿದ್ದಳು. ಐದು ವರ್ಷಕ್ಕೇ ಅವಳ ಮಗಳು ಅವಳಿಗಿಂತ ಎತ್ತರ ಆಗಿರುವಳೆಂದು ಅನಸೂಯಾಳಿಗೆ ಹಿಗ್ಗು. ಅಪ್ಪನ ಮುಖ ಕಾಣದಿದ್ದರೂ